9) ಅಧ್ಯಕ್ಷರ ಅಪ್ಪಣೆ ಮೇರೆಗೆ ನೀಡಿದ ಮಂತ್ರಿಗಳ ಹೇಳಿಕೆ

ವಿಷಯ :- ಸರ್ಕಾರಿ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಸೈಕಲ್ ನೀಡಿಕೆ ಕಾರ್ಯಕ್ರಮದಲ್ಲಿ ಆಗುತ್ತಿರುವ ಲೋಪದೋಷಗಳ ಬಗ್ಗೆ.

ಶ್ರೀ ಬಿ.ಎಸ್. ಹೊರಟ್ಟಿ :- ನೋಡಿ, ದಿನೇಶ್ ಗುಂಡೂರಾವರ್‌ರವರು ಸೈಕಲ್ ಬೆಲೆ 1,746.00 ರೂಪಾಯಿಗಳೆಂದು ಹೇಳಿದರು. ಕಡತದಲ್ಲಿ ತಪ್ಪು ಮಾಹಿತಿ ಹೋಗಬಾರದು. ತಪ್ಪು ಕಲ್ಪನೆ ಆಗಬಾರದು. ಅವರು ಬರೀ ರೇಟ್ ಬಗ್ಗೆಯಷ್ಟೇ ಹೇಳಿದರು. Extra fitting, tax, delivery, ಇವೆಲ್ಲವನ್ನೂ ಕೂಡಿದರೆ, ಇದಕ್ಕಿಂತಲೂ ಜಾಸ್ತಿಯಾಗುತ್ತದೆ. ನಾನು ಆ ಕಡೆ ನೋಡಲಿಲ್ಲ. ಇದೆಲ್ಲವನ್ನೂ ಅವರು ಹೇಳಲಿಲ್ಲ. ಬರೀ ರೇಟ್ ಹೇಳಿದರು. ಇವತ್ತು ಇಲ್ಲೆಲ್ಲಾ 100 ರೂಪಾಯಿ fitting, delivery ಇಲ್ಲ, tax ಇದೆ, ಎಲ್ಲವೂ ಅದರಲ್ಲಿದೆ. ಇದೆಲ್ಲವನ್ನೂ ನೋಡಿದರೆ, ಇದಕ್ಕಿಂತಲೂ ರೇಟ್ ಜಾಸ್ತಿಯಾಗುತ್ತದೆ. ಮತ್ತು ಪಾರದರ್ಶಕ ಕಾಯ್ದೆಯನ್ವಯ ಖರೀದಿಸಿ. . . .

ಶ್ರೀ ದಿನೇಶ್ ಗುಂಡೂರಾವ್ :- Extra fittings ನನಗೂ ಗೊತ್ತಿದೆ. ನಾವು ಅಷ್ಟು ನೋಡುವುದಿಲ್ಲವೇ?

ಛೇರ್ಮನ್ :- ದಿನೇಶ್‌ರವರೆ, ಅವರು statement ಮಾಡುತ್ತಿದ್ದಾರೆ, ನಂತರ, ತಾವು ಮತ್ತೆ clarification ಕೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ :- ತಾವು ಈ ಮನೆ ಮೂಲಕ ಲಕ್ಷಂತರ ಬೈಸಿಕಲ್‌ಗಳನ್ನು ಹೊಂದಿರುವ ತಂದೆ-ತಾಯಿಗಳು ಅನುಮಾನಕ್ಕೆ ಅಥವಾ ಪ್ರಾಮಾಣಿಕವಾಗಿ ಕೆಲಸ ಮಾಡುವ ಅಧಿಕಾರಿಗಳು ಯಾವುದೇ ಗೊಂದಲಗಳಿಗೆ ಒಳಗಾಗುವುದಕ್ಕೆ ಅವಕಾಶವಾಗಬಾರದು, ತಪ್ಪು ಗ್ರಹಿಕೆಯಾಗಬಾರದೆಂದು ನನ್ನ ಉದ್ದೇಶ. ಅದಕ್ಕೋಸ್ಕರ, ನೀವು ಅದರ copy ಕಳುಹಿಸಿಕೊಡಿ ಎಂದು ಹೇಳಿದೆ. 1,746.00 ರೂಪಾಯಿಗಳಿಗೆ Atlas Cycle ನವರು ಕೊಡುತ್ತೇವೆಂದು ಉತ್ತರ ಕೊಟ್ಟಿದ್ದೀರೆಂದು ಹೇಳಿದಿರಿ. ನಾವು 2,030.00 ರೂಪಾಯಿಗಳಿಗೆ ಮನೆ ಬಾಗಿಲಿಗೇ ಡೆಲೆವರಿ ಕೊಡುವುದಾಗಿದೆ. ಅದೇ quotation ನಲ್ಲಿ ಅವರು ಏನು ಹೇಳಿದ್ದಾರೆಂದರೆ, 36 ರೂಪಾಯಿ per cycle shall be charged for coloured bicycle. Extra Rs. 36.00 ಅದಾದ ಮೇಲೆ CST 4% will be charged extra, and 10% in case of unregistered firm. ಅದಾದ ಮೇಲೆ fitting and delivery charges Rs. 100.00 extra. ಇದೆಲ್ಲವೂ ಸೇರಿ 240, 250 ರೂಪಾಯಿಗಳಾಯಿತು. ಸ್ವಾಮಿ ಈ ತರಹ ಅವಸರವಾದರೆ ಆಗುವುದಿಲ್ಲ. ನಾನು ತಮ್ಮಲ್ಲಿ ವಿನಯಪೂರ್ವಕವಾಗಿ ಏನು ವಿನಂತಿ ಮಾಡಿಕೊಳ್ಳುತ್ತಿದ್ದೇನೆಂದರೆ, ಇದರಲ್ಲಿ ನನ್ನದೇನೂ ಇಲ್ಲ ಸಾರ್, ಈ ಸೈಕಲ್, ಈ ಇಲಾಖೆ, ಎರಡೂ ನನ್ನದಲ್ಲ. ನಾನು ಏನು

ಹೇಳುವುದಕ್ಕೆ ಹೊರಟಿದ್ದೇನೆಂದರೆ, ಈ ಕಾರ್ಯಕ್ರಮ ಮಾಡಿದ ತಕ್ಷಣ, ಬೈಸಿಕಲ್ ಕೊಡುವುದನ್ನು ಘೋಷಿಸಿದ ತಕ್ಷಣ ಎರಡೂವರೆ ತಿಂಗಳುಗಳಲ್ಲಿ ಫೈನಲೈಸ್ ಮಾಡಿದ ಹೆಣ್ಣು ಮಕ್ಕಳಿಗೆ ಬೈಸಿಕಲ್ ಅನ್ನು ಕೊಟ್ಟರು. ಅದಾದ ನಂತರ, ಗಂಡು ಮಕ್ಕಳಿಗೂ ಕೊಡಬೇಕೆಂದಾಗ, ಕರೆಸಿ, ಒಪ್ಪಿಸಿ, ಅದೇ ರೇಟಿಗೆ ಕೊಡಿಸುವಂಥ ವ್ಯವಸ್ಥೆ ಮಾಡಿದರು. ಆ ಅಧಿಕಾರಿಗಳು ಒಳ್ಳೆಯ ಕೆಲಸ ಮಾಡಿದರು ಎಂಬ ಭಾವನೆ ನಮಗಿದೆ. ರಾಜ್ಯದ ಜನತೆಗೆ ಏನೋ 1,746.00 ರೂಪಾಯಿಗಳಿಗೆ ಸಿಗುತ್ತಿದ್ದಂತಹ ಸೈಕಲ್ಲನ್ನು ಎಲ್ಲೋ ಎರಡು ಸಾವಿರ ಚಿಲ್ಲರೆಗೆ ಮಾಡಿಕೊಟ್ಟರು, ಮಧ್ಯವರ್ತಿಗಳು ಎಲ್ಲಿಯೋ ದುಡ್ಡು ಹೊಡೆದರು. ಎಂಬ message ಹೋಗಬಾರದೆಂಬ ನಮ್ಮ ವಿನಯಪೂರ್ವಕ ವಿನಂತಿಯೇ ಹೊರತು, ಬೇರೆ ಇನ್ನೇನಿದೆ, ದಿನೇಶ್ ಗುಂಡೂರಾವ್‌ರವರೆ? ನೀವು ಯುವಕರಿದ್ದೀರಿ, ತಪ್ಪಾಗಿದ್ದಾಗ ಒಪ್ಪಿಕೊಳ್ಳಬೇಕು. ಇಲ್ಲವೇ, ಯಡಿಯೂರಪ್ಪನವರೆ, ಈಗ ನೀವು ಹೇಳುತ್ತಿರುವುದು ಸರಿ ಇದೆಯೆಂದು ಒಪ್ಪಿಕೊಳ್ಳಬೇಕು. ಅದರ ಬಗ್ಗೆಯೂ ನೀವು argue ಮಾಡಿದರೆ, ಇದರ ಮೇಲೆ ನಾವು ಇನ್ನೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ದಿನೇಶ್ ಗುಂಡೂರಾವರ್ :– ಸರ್ ನಾವು ಹೇಳುತ್ತಿರುವುದು ಇಷ್ಟೇ, ಈಗ ಬೇಕಾದಷ್ಟು ಹೇಳಿದಿರಲ್ಲ ಸರ್. ಅದು 100 ರೂಪಾಯಿ extra ಎಂದು ಹೇಳಿದಿರಲ್ಲ, ಅದನ್ನು ತೆಗೆದುಕೊಂಡರೂ ಕೂಡ, ಟ್ಯಾಕ್ಸ್ ತೆಗೆದುಕೊಂಡರೂ ಕೂಡ, 150 ರೂಪಾಯಿ ವ್ಯತ್ಯಾಸ ಬರುತ್ತಿದೆ. ನೀವಂತೂ ಇದರಲ್ಲಿ involve ಆಗಿದ್ದೀರೆಂದು ನಾವು ಆರೋಪ ಮಾಡುತ್ತಿಲ್ಲ. ನಾವು ಹೇಳುತ್ತಿರುವುದು ಎಲ್ಲಿಯೋ ಒಂದು ಕಡೆ ಲೋಪವಾಗಿರಬಹುದು. ದಯವಿಟ್ಟು ಇದರ ಬಗ್ಗೆ ತನಿಖೆ ಮಾಡಿಸಿ. ಇದರಿಂದ ರಾಜ್ಯ ಸರ್ಕಾರಕ್ಕೇನಾದರೂ ಉಳಿತಾಯವಾದರೆ, ಯಾಕೆ ಉಳಿಸಬಾರದು? ಏಕೆಂದರೆ ಮುಂದೆಯೂ ಕೂಡ ನೀವು ಸೈಕಲ್‌ಗಳನ್ನು ತೆಗೆದುಕೊಳ್ಳುತ್ತೀರಿ, ಪರ್ಚೇಸ್ ಮಾಡುತ್ತೀರಿ. ಪರ್ಚೇಸ್ ಮಾಡಿದರೆ, ಇನ್ನೂ ಕಡಿಮೆ ರೇಟ್‌ನಲ್ಲಿ ಸಿಗುತ್ತದೆ, ತೆಗೆದುಕೊಳ್ಳಿ, ಸರ್. ನಾನೇನೂ ಸುಮ್ಮನೆ ಜವಾಬ್ದಾರಿಯಿಂದ ಹೇಳುತ್ತಿಲ್ಲ. ನಿಮಗೆ ಎಷ್ಟು ಕಾಳಜಿ ಇದೆಯೆಂಬುದು ನಮಗೆ ಗೊತ್ತಿದೆ. ಕಾರ್ಯಕ್ರಮ ಚೆನ್ನಾಗಿದೆ ಸರ್. ಇದರ ಬಗ್ಗೆ ಒಂದು ತನಿಖೆ ಮಾಡಿಸಿ.

ಶ್ರೀ ಬಿ.ಎಸ್. ಹೊರಟ್ಟಿ :– ಮಾನ್ಯ ಅಧ್ಯಕ್ಷರೆ, Transparency Act ನೊಳಗೆ ನಾವು ಟೆಂಡರ್ ಕರೆದು ನಾಲ್ಕು ಕಂಪನಿಗಳಿಂದ ತೆಗೆದುಕೊಂಡಿದ್ದೇವೆ. ಮತ್ತು ಇವರ ಅಭಿಪ್ರಾಯದಲ್ಲಿ ಕ್ವಾಲಿಟಿ ಎಂದರೆ, ಅದು ಯಾವ ರೀತಿ ಇದೆಯೆಂಬುದು ಗೊತ್ತಿಲ್ಲ. ಇವರು ಹೇಳಿದ್ದಾರೆ. ಈ ಸೈಕಲ್ ನೀಡುವ ಕಾರ್ಯಕ್ರಮವನ್ನು 202 ತಾಲ್ಲೂಕುಗಳಲ್ಲಿ ಹಮ್ಮಿಕೊಂಡಿದ್ದೇವೆ. ಅಲ್ಲಿ ವಿತರಿಸಿರುವ ಸೈಕಲ್ ಹಾಗೂ ಇಲ್ಲಿ ಇವರುಗಳು ವಿತರಿಸಿರುವ ಸೈಕಲ್‌ಗಳನ್ನು ಬೇಕಾದರೆ ತಂದು ಚೆಕ್ ಮಾಡಲಿ. ನಾವು ಏನು ಹೇಳುತ್ತೇವೆಂದರೆ,

ಇಷ್ಟೆಲ್ಲಾ ಆದಾಗ್ಯೂ, ಮನೆವರೆಗೆ ಡೆಲಿವರಿ ಕೊಡುವಂತಹ ಕೆಲಸವನ್ನು ಮಾಡಿದ್ದೇವೆ. ಇದರಲ್ಲಿ ಯಾವುದೇ ರೀತಿಯಲ್ಲೂ ಅವ್ಯವಹಾರಗಳಾಗಲಿ, ಮತ್ತೊಂದಾಗಲಿ, ಆಗಿಲ್ಲವೆಂಬುದನ್ನು ನಾನು ನನ್ನ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಿದ್ದೇನೆ.

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಆಗಿಲ್ಲವೆಂದು ನೀವು ಹೇಗೆ ಹೇಳುತ್ತೀರಿ?

(ಗೊಂದಲ)

ಡಾ॥ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ :– ಇದರಲ್ಲಿ ಭ್ರಷ್ಟಾಚಾರ ಆಗಿದೆ ಎಂಬುದನ್ನು ನಾವು ಪ್ರೂವ್ ಮಾಡುತ್ತೇವೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– ಈಗ ನೀವು ನನ್ನ ಮಾತುಗಳನ್ನು ಕೇಳಿದರೆ, ನಿಮಗೆ ಬಹಳ ಸುಲಭವಾಗುತ್ತದೆ. ಇಲ್ಲಿ ಯೋಜನೆಯ ಸಾರ್ಥಕತೆಯನ್ನು ಯಾರೂ ಪ್ರಶ್ನೆ ಮಾಡಲಿಲ್ಲ. ಇದರಲ್ಲಿ ಲಂಚದ ಆರೋಪವನ್ನು ಯಾರ ಮೇಲೂ ಮಾಡಲಿಲ್ಲ. ಚಾರ್ಜ್ ಮಾಡತಕ್ಕಂಥ ಉದ್ದೇಶವೂ ಇಲ್ಲ. ಸನ್ಮಾನ್ಯ ಸದಸ್ಯರೂ ಕೂಡ ಮಾತನಾಡುತ್ತಾ, ಇದೊಂದು ಒಳ್ಳೆಯ ಯೋಜನೆ ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಮಾನ್ಯ ಯಡಿಯೂರಪ್ಪನವರು ತಂದು ತೋರಿಸಿದ ಮೇಲೆ ನಮಗೂ ಅನ್ನಿಸಿತು. ಮತ್ತೆ ದಿನೇಶ್ ಗುಂಡೂರಾವ್ ಅವರನ್ನು ಕರೆಸಿ, ಚರ್ಚೆ ಮಾಡಿದೆ. ಇದೆಲ್ಲವನ್ನೂ ಲೆಕ್ಕ ಹಾಕಿದರೆ, ಎಲ್ಲೋ 100, 120 ರೂಪಾಯಿ difference ಬರುತ್ತದೆ. ನಾನು ಹೇಳುವುದೇನೆಂದರೆ, ಆ ಕಂಪನಿಯ Officers ಗೆ ಹೇಳಿ ನೀವು ಒಂದು ಪತ್ರ ಬರೆಸಿ, ಏನ್ರಿ ಬೇರೆ ಕಂಪನಿಯವರು ಕೇಳಿದಾಗ ಅವರಿಗೆ ರೇಟ್ ಹೇಳಿದಿರಿ, ನಮಗೆ ಈ ರೇಟ್ ಹೇಳಿದಿರಿ, ಎಲ್ಲವನ್ನೂ total ಮಾಡಿದಾಗ ಈ ವ್ಯತ್ಯಾಸ ಬರುತ್ತದಲ್ಲ. quality ಯಲ್ಲಿ ಏನಾದರೂ ವ್ಯತ್ಯಾಸ ಬರುತ್ತದೆಯೇ ಎಂದು ತಿಳಿದುಕೊಂಡು, ಅನಂತರ, ಒಂದು ದಿವಸ ಮಾಹಿತಿ ಕೊಡಿ. ಇದರಲ್ಲಿ ಯಾರಿಗೂ ಕೂಡ ಮಸಿ ಬಳಿಯಬೇಕು, ಆಪಾದನೆ ಮಾಡಬೇಕು, ಎನ್ನುವುದಿಲ್ಲ. ನಮಗೆಲ್ಲರಿಗೂ ಖುಷಿ, ನಾವುಗಳೆಲ್ಲರೂ ಆ ಕಾರ್ಯಕ್ರಮಗಳಿಗೆ ಹೋಗಿ ಭಾಗವಹಿಸಿ ಮಕ್ಕಳಿಗೆ ಬೈಸಿಕಲ್‌ಗಳನ್ನು ಕೊಟ್ಟು ಬಂದಿದ್ದೇವೆ. ನಾವು ಅದರ ಬಗ್ಗೆ ಸದುದ್ದೇಶದಿಂದ ಹೇಳುತ್ತಿದ್ದಾಗ, ಅದನ್ನು ಮತ್ತಷ್ಟು ಲಂಬಿಸಿಕೊಂಡು ಹೋಗುವುದು ಬೇಡ. ದಿನೇಶ್ ಗುಂಡೂರಾವ್‌ರವರು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಇರು ಯಾರ ವಿರುದ್ಧವೂ ಆರೋಪವಲ್ಲ. ಲೆಕ್ಕದಲ್ಲಿ ಸ್ವಲ್ಪ ವ್ಯತ್ಯಾಸ ಬರುತ್ತಿರುವುದರಿಂದ, ಇವೆಲ್ಲಾ ಹಾಕಿದರೂ ಕೂಡ ಸುಮಾರು 100, 120 ರೂಪಾಯಿಗಳಷ್ಟು ವ್ಯತ್ಯಾಸ ಬರುವುದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಹೇಳಿ, ಆ ಕಂಪನಿಯವರೆಗೆ ಒಂದು ಪತ್ರ ಬರೆಯಲಿ. ಇಂತಹವರಿಗೆ ಈ ಪತ್ರದಲ್ಲಿ ಹೀಗೆ ಹೇಳುತ್ತಿದ್ದೀರಲ್ಲ, ನಮಗೆ ಹೀಗೆ ಹೇಳಿದ್ದೀರಿ, ಏನು ಕಾರಣವೆಂದು ತಿಳಿದುಕೊಂಡು ಆಮೇಲೆ ಒಂದು ದಿವಸ ಸಮಂಜಸವಾಗಿ ಒಂದು statement ಮಾಡಿದರೆ ಮುಗಿದುಹೋಗುತ್ತದೆ. ಅದಕ್ಕೆ ಏಕೆ ಅಷ್ಟು ತಲೆ ಕೆಡಿಸಿಕೊಳ್ಳುತ್ತೀರಿ?

ಶ್ರೀ ಬಿ.ಎಸ್. ಹೊರಟ್ಟಿ :– ಇದಕ್ಕೆ ಮಾಹಿತಿ ಪಡೆದುಕೊಂಡು ಅನಂತರ, ತಮಗೆ ಉತ್ತರ ಕೊಡುತ್ತೇನೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ :– That is good

10. ಗಮನ ಸೆಳೆಯುವ ಸೂಚನೆ

5) ವಿಷಯ :– ರಾಯಚೂರು ನಗರಸಭೆಯಲ್ಲಾಗಿರುವ ಅವ್ಯವಹಾರದ ಬಗ್ಗೆ.

ಶ್ರೀ ಎ. ಪಾಪರೆಡ್ಡಿ (ರಾಯಚೂರು) :– ರಾಯಚೂರು ನಗರಸಭೆಯಯಲ್ಲಿನ ಅವ್ಯವಹಾರಗಳ ಬಗ್ಗೆ ಲೋಕಾಯುಕ್ತರು ವರದಿ ನೀಡಿದ್ದಾಗ್ಯೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳದಿರುವ ಬಗ್ಗೆ ಪೌರಾಡಳಿತ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಆರ್. ಅಶೋಕ್ (ಆರೋಗ್ಯ ಸಚಿವರು) (ಪೌರಾಡಳಿತ ಸಚಿವರ ಪರವಾಗಿ):– ರಾಯಚೂರು ನಗರಸಭೆಯಲ್ಲಿನ ಅವ್ಯವಹಾರ ಹಾಗೂ ಅಕ್ರಮಗಳ ಕುರಿತಂತೆ ತನಿಖೆ ನಡೆಸಿ ವರದಿ ಸಲ್ಲಿಸುವ ಸಲುವಾಗಿ ಪ್ರಕರಣವನ್ನು ಮಾನ್ಯ ಲೋಕಾಯುಕ್ತಕ್ಕೆ ವಹಿಸಲಾಗಿತ್ತು. ಅದರಂತೆ ಈ ಪ್ರಕರಣದಲ್ಲಿ ಭಾಗಿಯಾಗಿರುವ ಅಧಿಕಾರಿ/ನೌಕರರ ವಿರುದ್ಧ ಮಾನ್ಯ ಲೋಕಾಯುಕ್ತರಿಂದ ವಿಚಾರಣಾ ವರದಿ ಬಂದಿದ್ದು, ಅದರಂತೆ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಅಲ್ಲದೇ ಶೇ. 18ರ ಯೋಜನೆಯಲ್ಲಿ ರಾಯಚೂರು ನಗರಸಭೆಯ ಆಯವ್ಯಯದಲ್ಲಿ ತೆಗೆದಿರಿಸಲಾಗಿದ್ದ ಮೊತ್ತದಲ್ಲಿ ಸಾಮೋಚಿತ ಚಟುವಟಿಕೆಗಳಿಗೆ ಶೇ. 40. ಆರ್ಥಿಕ ಚಟುವಟಿಕೆಗಳಿಗೆ ಶೇ. 40 ಹಾಗೂ ಇತರೆ ಚಟುವಟಿಕೆಗಳಿಗೆ ಶೇ. 20 ರಷ್ಟು ಖರ್ಚುಮಾಡುವ ಕುರಿತಂತೆ ಕ್ರಿಯಾ ಯೋಜನೆಯನ್ನು ತಯಾರಿಸಿ ಸಾಮಾನ್ಯ ಮಹಾ ಸಭೆಯಲ್ಲಿ ಅನುಮೋದಿಸಿಕೊಂಡು ಅನುಮೋದನೆಗೊಂಡ ಕ್ರಿಯಾ ಯೋಜನೆಗಳಿಗೆ ಜಿಲ್ಲಾಧಿಕಾರಿಗಳ ಮಂಜೂರಾತಿ ಪಡೆದುಕೊಂಡು ಅನುಷ್ಠಾನಗೊಳಿಸಲಾಗುತ್ತಿದೆ. ಶೇ. 18 ರ ಯೋಜನೆಯ ಮೊತ್ತವನ್ನು ಸಾಮಾಜಿಕ, ಆರ್ಥಿಕ ಹಾಗೂ ಇತರೆ ಚಟುವಟಿಕೆಗಳಿಗೆ ವಿನಿಯೋಗಿಸಲಾಗುತ್ತಿದೆ.

ಅಲ್ಲದೆ, ರಾಯಚೂರು ನಗರಸಭೆಯ ನೈರ್ಮಲೀಕರಣಕ್ಕೆ ಸಂಬಂಧಿಸಿದಂತೆ ಒಟ್ಟು 4 ಪ್ಯಾಕೇಜುಗಳನ್ನು ಮಾಡಿ ಅವುಗಳಲ್ಲಿ 1, 2 ಮತ್ತು 3 ನೇ ಪ್ಯಾಕೇಜುಗಳನ್ನು ಖಾಸಗಿಯವರಿಗೆ ನೀಡಲಾಗಿದ್ದು, ತತ್ಸಂಬಂಧದಲ್ಲಿನ ಕ್ರಿಯಾ ಯೋಜನೆಗೆ ಪೌರಾಡಳಿತ ನಿರ್ದೇಶನಾಲಯದ ಅನುಮೋದನೆ ಪಡೆದುಕೊಳ್ಳಲಾಗಿದೆ. ಪ್ಯಾಕೇಜ್ ನಂ. 1 ರಲ್ಲಿ 40 ಜನ, ಪ್ಯಾಕೇಜ್ 2 ರಲ್ಲಿ 78 ಜನ ಮತ್ತು ಪ್ಯಾಕೇಜ್ ನಂ3 ರಲ್ಲಿ 62 ಜನ ಒಟ್ಟು 180 ಜನ ಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದು, ಡಿಸೆಂಬರ್ 2006 ರವರೆಗೆ ಗುತ್ತಿಗೆದಾರರ ಮೂಲಕ ವೇತನ ಪಾವತಿಸಲಾಗಿದೆ.